ಯಮ, ಮಾರಿ ಇವರ ವಾಹನದಂತೆ ಭಯಂಕರನಾಗಿ ಕತ್ತಿಯೊಡನೆ ನಿಂತ ಮಾರಿದತ್ತ ರಾಜನು ತಾನು ಬಲಿ ಕೊಡುವುದಕ್ಕಾಗಿ ಎಳೆಹರೆಯದ ಚಿಕ್ಕಮಕ್ಕಳನ್ನು ಹಿಡಿತರಿಸುತ್ತಾನೆ. ಚಂಡಕರ್ಮನೆಂಬ ತಳವಾರನು ಮಕ್ಕಳಾದ ಅಭಯರುಚಿ, ಅಭಯಮತಿಯರನ್ನು ಹಿಡಿದುಕೊಂಡು ಬರುತ್ತಾನೆ. ಈ ಇಬ್ಬರು ಮಕ್ಕಳು ಮಾರಿದತ್ತನ ಪಟ್ಟಣದ ಹೊರಗೆ ಉಳಿದುಕೊಂಡಿದ್ದ ಸುದತ್ತಾಚಾರ್ಯರೆಂಬವರ ಶಿಷ್ಯರು. ಈ ಅಣ್ಣ ತಂಗಿ ಶಿಷ್ಯರನ್ನು ಗುರುವು ಭಿಕ್ಷೆಗಾಗಿ ಊರೊಳಗೆ ಕಳಿಸಿರುತ್ತಾರೆ. ಆ ವೇಳೆಯಲ್ಲಿ ಚಂಡಕರ್ಮನು ಹುಲಿಯಂತೆ ಈ ಜಿಂಕೆಮರಿಗಳ ಮೇಲೆ ಬಿದ್ದು ಹಿಡಿದುಕೊಂಡು ಬಂದ. ಮಾರಿ ದೇವಾಲಯದ ಸುತ್ತಿನ ಭೀಕರ ವಾತಾವರಣವನ್ನು ಕಂಡು ಅಭಯರುಚಿ ಅಭಯಮತಿಯರೇನೂ ಹೆದರಲಿಲ್ಲ. ಜಗತ್ತಿನ ಅಪಾಯಕೋಟಿಗಳಿಗೆ ಈ ದೇಹವೇ ಮೂಲ ಕಾರಣ. ಆದ್ದರಿಂದ ಇಲ್ಲಿ ಹುಟ್ಟಿ ಬಂದ ಮೇಲೆ ಸುಖವನ್ನು ಹುಡುಕುವುದು ಕಲ್ಲು ಮೊರಡಿಯಲ್ಲಿ ಮಾದಲ ಫಲವನ್ನು ಹುಡುಕಿದಂತೆ ಎಂದುಕೊಂಡು ದೃಢಚಿತ್ತರಾಗುತ್ತಾರೆ.

ಕಿತ್ತ ಕರವಾಳ್ಗಮೆನಗಂ
ಮೃತ್ಯುವಿನಂತಿರ್ದ ಮಾರಿಗಂ ಬೆದಱದೆ ನಿಂ
ದರ್ತಿಯೆನೆ ನುಡಿದರಿವರ ನೆ
ಗಳ್ತೆ ಕರಂ ಪಿರಿದು ಧೀರರಕಟ ಕುಮಾರರ್॥

ಭಯಂಕರವೆನಿಸುವ, ಸಾವಿನ ತೀವ್ರತೆ ಹುಟ್ಟಿಸುವ ಈ ವಾತಾವರಣವನ್ನು ಕಂಡು ಕುಮಾರರು ವಿಚಲಿತರಾಗದೇ ಇರುವರಲ್ಲ ಎಂದು ಮಾರಿದತ್ತನು ಮಕ್ಕಳ ಧೈರ್ಯವನ್ನು ಮೆಚ್ಚಿದ. ಜನ್ನನ ಯಶೋಧರ ಚರಿತೆ ರೂಪಕ ಶಕ್ತಿಯನ್ನು ಪಡೆಯುವುದು ಇಲ್ಲಿಯೇ. ವಚನಕಾರರ ಸಮೂಹವೂ ಕೂಡ ಈ ಬಗೆಯ ಸಾಮಾಜಿಕ ಹಿಂಸೆಯ ವಿರುದ್ಧವೇ ಹೋರಾಡಿ ದಯೆ ಮತ್ತು ಧರ್ಮದ ಮೂಲ ತತ್ವವನ್ನು ಪ್ರಚುರಪಡಿಸಲು ಪ್ರಯತ್ನಿಸಿತು. ಇದಕ್ಕಿಂತಲೂ ಪ್ರಾಚೀನವೆನಿಸುವ ಜೈನಧರ್ಮದ ಪ್ರಮುಖ ತತ್ವವೂ ಅಹಿಂಸೆಯೇ. ಈ ಧರ್ಮದ ಅಹಿಂಸಾ ಪ್ರತೀಕವೆನಿಸುವ ಸೌಮ್ಯ ಮೂರ್ತಿಗಳೆನಿಸುವ ಬಾಲಕ, ಬಾಲಕಿಯರು ಪರಂಪರಾನುಗತ ಮೌಢ್ಯದ ಎದುರು ನಿಲ್ಲುತ್ತಾರೆ. ಮಾರಿದತ್ತನು ಮೂಢನಂಬಿಕೆಯ ಸಂಬಂಧದ ಪ್ರತಿರೂಪ. ಅಂದರೆ ಅದನ್ನೇ ದೈವಭಕ್ತಿ ಎಂದು ಸಾಮಾನ್ಯ ಜನಸಮೂಹ ತಿಳಿದಿದೆ. ಈ ಬಗೆಯ ಭಕ್ತಿಯೇ, ಬಲಿಯೇ ಲೋಕ ಕಲ್ಯಾಣದ ಮಾರ್ಗ ಎಂಬ ಅಜ್ಞಾನವನ್ನು ಹೊಂದಿದೆ. ಇಂಥದ್ದೊಂದು ಭಯಂಕರ ಹಿಂಸೆಯ ಎದುರು ಮಕ್ಕಳ ರೂಪದ ನಿರ್ಮಲ ಧಾರ್ಮಿಕತೆಯನ್ನು ಜನ್ನ ಮುಖಾಮುಖಿ ಮಾಡುವುದನ್ನು ಯಶೋಧರ ಚರಿತೆಯಲ್ಲಿ ಗಮನಿಸಬೇಕು. ಅಮೃತಮತಿ ಮತ್ತು ಅಷ್ಟಾವಂಕನ ಪ್ರಣಯ ಪ್ರತಿಪಾದನೆಗಿಂತ, ಕಾಲಾನುಕಾಲದಿಂದ ಬಂದ ಮೂಢನಂಬಿಕೆಯನ್ನು ಅಹಿಂಸಾ ರೂಪಿಗಳಿಂದ ತೊಡೆಯಲು ಕವಿ ಪ್ರಯತ್ನಿಸಿದ್ದಾನೆ. ಧರ್ಮ, ದಯೆಯ ಸುತ್ತ ಅಜ್ಞಾನದ ಮುಳ್ಳು ಬೇಲಿ ಸುತ್ತುವರೆದಿದೆ. ಈ ಬೇಲಿಯೊಳಗೆ ನಡೆಯುವ ಹಿಂಸೆ ಅಸಾಧಾರಣ ಸ್ವರೂಪದಲ್ಲಿರುವಂಥದ್ದು. ಜನ್ನ ಬೇಕೆಂತಲೇ ತೀವ್ರ ಸ್ವರೂಪದ ಹಿಂಸೆಯನ್ನೂ ಅದರ ವಿರುದ್ಧ ದಿಕ್ಕಿನ ಶಿಶು ರೂಪದ ನಿರ್ಮಲ ಧರ್ಮವನ್ನು ಎದುರೆದುರು ನಿಲ್ಲಿಸುತ್ತಾನೆ. ಕಡೆಗೆ ದಯೆ, ಹಿಂಸೆಯ ಎದುರು ಗೆಲ್ಲುತ್ತದೆ.

ಯಶೋಧರ ಚರಿತೆಯ ಕಥನ ತಂತ್ರವನ್ನು ಮತ್ತೆ ಗಮನಿಸಬೇಕು. ಮಾರಿಯ ದೇವಸ್ಥಾನದ ಎದುರೇ ಅಭಯರುಚಿ ಅಭಯಮತಿಯರ ಇನ್ನೊಂದು ಹಿಂಸೆಯ ಕಥೆ ಆರಂಭವಾಗುತ್ತದೆ. ಹಿಂಸೆಯ ಮೂಲ ಪುರುಷ ಮನಷ್ಯನೇ. ಅದನ್ನು ಗೆಲ್ಲಬೇಕಾದವನೂ ಅವನೇ! ಇದರ ಸಾಧನೆಯಾಗಬೇಕಾಗಿರುವುದು ಜ್ಞಾನದ ಬೆಳಕಿನಿಂದ. ಮನುಷ್ಯನ ಅಂತರಂಗದ ಕನ್ನಡಿ ಶುದ್ಧವಾಗಿರಬೇಕು. ಜನ್ನ ಇಂಥ ವೇಳೆ ಬರೆಯುವ ಒಂದು ಪದ್ಯ –